# ಮೆಚ್ಚಿನ ಗೊಂಬೆ

## ಅ) ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. (Answer the following questions)

೧. ಗೊಂಬೆಗಳನ್ನು ಯಾವ ಯಾವ ವಸ್ತುಗಳಿಂದ ತಯಾರಿಸುತ್ತಾರೆ?

ಉ: ಗೊಂಬೆಗಳನ್ನು ಮರ, ಮಣ್ಣು, ಪ್ಲಾಸ್ಟಿಕ್, ರಬ್ಬರ್, ಪಿಂಗಾಣಿ, ಬಟ್ಟೆ, ಹತ್ತಿ, ಬಿದಿರು, ಕಾಗದಗಳಿಂದ ತಯಾರಿಸುತ್ತಾರೆ.

೨. ಗೊಂಬೆಗೆ ನೋವಾದರೆ ಮಕ್ಕಳು ಏನು ಮಾಡುತ್ತಾರೆ?

ಉ: ಗೊಂಬೆಗೆ ನೋವಾದರೆ ಮಕ್ಕಳು ಅದನ್ನು ಎತ್ತಿ ಮುದ್ದಾಡಿ ಸಮಾಧಾನ ಮಾಡುತ್ತಾರೆ. ಗೊಂಬೆ ಕೆಳಗೆ ಬಿದ್ದರೆ ಅತ್ತು, ಅದನ್ನು ಎತ್ತಿಕೊಂಡು ಹಾಡು ಹೇಳಿ ಸಮಾಧಾನ ಮಾಡುತ್ತಾರೆ.

೩. ಅಳುವ ಗೊಂಬೆಗೆ ಮಕ್ಕಳು ಏನೆಂದು ಹಾಡಿ ಸಮಾಧಾನ ಮಾಡುತ್ತಾರೆ?

ಉ: ಅಳುವ ಗೊಂಬೆಗೆ ಮಕ್ಕಳು "ಅಳಬೇಡ ಅಳಬೇಡ ಗೊಂಬವ್ವ ನೀನು, ಜರತಾರಿ ಲಂಗ ಕೊಡಿಸುವೆನು ನಾನು" ಎಂದು ಹಾಡುತ್ತಾ ಸಮಾಧಾನ ಮಾಡುತ್ತಾರೆ.

೪. ಯಾವ ಹಬ್ಬದಂದು ಮನೆಗಳಲ್ಲಿ ಬೊಂಬೆಗಳನ್ನು ಅಲಂಕರಿಸುತ್ತಾರೆ?

ಉ: ನಮ್ಮ ನಾಡಹಬ್ಬ ದಸರಾದಂದು ಗೊಂಬೆಗಳನ್ನು ಅಲಂಕರಿಸುತ್ತಾರೆ.

೫. ಯಾವ ಯಾವ ರೂಪಗಳಲ್ಲಿ ಜನ್ಮ ತಾಳಿವೆ?

ಉ: ಸ್ಪ್ರಿಂಗ್ ಗೊಂಬೆ, ಕೀ ಗೊಂಬೆ, ಕೀಲು ಗೊಂಬೆ, ಯಂತ್ರದ ಗೊಂಬೆಗಳ ರೂಪಗಳಲ್ಲಿ ಜನ್ಮ ತಾಳಿವೆ.